# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಡಗಲಿ.

ಸಿ.ಸಿ. ನಂಃ 419/2019

ಸಿ.ಡಬ್ಲ್ಯೂಃ10 ಪಿಡಬ್ಲ್ಯೂಃ03

ಸಾಕ್ಷಿದಾರರ ಹೆಸರುಃ ಯು ದಾದಾಪೀರ ತಂದೆಃಅಕ್ಬರ ಸಾಬ್
ವಯಸ್ಸುಃ 40 ವರ್ಷ
ಉದ್ಯೋಗಃ ಮುಖ್ಯಪೇದೆ
ಸಾಕೀನಃ ಅರಸಿಕೇರೆ ಪೊಲೀಸ್ ಠಾಣೆ

ದಿಃ 25-11-2024 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.
ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ ;

**01.**ನಾನು ದಿಃ **02-01-2017** ರಿಂದ **30-11-2020** ವರೆಗೆ ನಾನು ಹಿರೇಹಡಗಲಿ ಪೊಲೀಸ್ ಠಾಣೆಯಲ್ಲಿ ಮುಖ್ಯಪೇದೆಯಾಗಿ ಕೆಲಸ ಮಾಡಿರುತ್ತೇನೆ.

**02.** ಸದರಿ ಪ್ರಕರಣದಲ್ಲಿ ದಿಃ **04-07-2017** ರಂದು ಸಂಜೆ.**05.00** ಗಂಟೆಗೆ ನಾನು ಠಾಣೆಯ **SHO** ಕರ್ತವ್ಯವನ್ನು ನಿರ್ವಹಿಸುತ್ತಿದ್ದಾಗ ಚಾ.ಸಾ.**01** ರವರು ಠಾಣೆಗೆ ಹಾಜರಾಗಿ ನೀಡಿ ಜ್ಞಾಪನಾ ದೂರು, ಪಂಚನಾಮೆ, ಸ್ವತ್ತು, ಮುದ್ದೆಮಾಲು ಮತ್ತು ಆರೋಪಿಯನ್ನು ಸ್ವೀಕರಿಸಿಕೊಂಡು ಠಾಣಾ ಗುನ್ನೆ ನಂ.**126/2017** ರಲ್ಲಿ ಕಲಂ **32,34** ಅಬಕಾರಿ ಕಾಯ್ದಿ ಅಡಿ ಪ್ರಕರಣವನ್ನು ದಾಖಲಿಸಿಕೊಂಡು ಅದೇ ದಿನ ನ್ಯಾಯಾಲಯಕ್ಕೆ ಪ್ರ.ವ. ವರದಿಯನ್ನು ಸಲ್ಲಿಸಿರುತ್ತೇನೆ ಅದನ್ನು ಈಗ ನೋಡುತ್ತಿದ್ದು ನಿಪಿ **02** ಮತ್ತು **03** ಎಂದು ಗುರುತಿಸಲಾಯಿತು ಸಾಕ್ಷಿಯ ಸಹಿಯನ್ನು **2** ಎ ಮತ್ತು **3** ಎ ಎಂದು ಗುರುತಿಸಲಾಯಿತು. ನಂತರ ತನಿಖೆಯನ್ನು ಮುಂದುವರೆಸಿ ಅದೇ ದಿನ ಆರೋಪಿತನ ಮೇಲೆ ದಸ್ತಗಿರಿ ಕ್ರಮವನ್ನು ಅನುಸರಿಸಿ ನಂತರ ಆರೋಪಿತನ ಸ್ವಕೃಪಿ ಹೇಳಿಕೆಯನ್ನು ಪಡೆದುಕೊಂಡು ಸೂಕ್ತ ಬೆಂಗಾವಲಿನೊಂದಿಗೆ ಆರೋಪಿತನನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ ನಂತರ ಚಾಸಾ **1** ರವರು ಜಪ್ತುಪಡಿಸಿಕೊಂಡ ಮಾಲನ್ನು ಠಾಣಾ **PF No 82/2017** ರಲ್ಲಿ ಅಳವಡಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಂತರ ಅದೇ ದಿನ ದಾಳಿಗೆ ಹೋದಂತಹ ಸಿಬ್ಬಂದಿಗಳಾದ ಚಾಸಾ **1, 2, 3,4,5** ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ನಂತರ ದಿನಾಂಕ **02.10.2017** ರಂದು ಸದರಿ ಪ್ರಕರಣದಲ್ಲಿ ಜಪ್ತು ಪಡಿಸಿಕೊಂಡ ಮುದ್ದೆ ಮಾಲನ್ನು ರಾಸಾಯನಿಕ ಪರೀಕ್ಷಾ ವರದಿಯನ್ನು ಪಡೆದುಕೊಳ್ಳಲು ಚಾಸಾ **6** ರವರ ಮೂಲಕ ಕಳಿಸಿಕೊಟ್ಟಿರುತ್ತೇನೆ ನಂತರ ಪ್ರಕರಣದ ಮುಂದಿನ ತನಿಖೆಗಾಗಿ ಚಾಸಾ **11** ರವರಿಗೆ ವರ್ಗಾಯಿಸಿರುತ್ತೇನೆ ಆ ದಿನ ನಾನು ಚಾಸಾ **1** ರವರಿಂದ ಸ್ವೀಕರಿಸಿದಂತಹ ಮುದ್ದೆ

ಮಾಲು ಹಾಗೂ ನಗದು ಹಣ, ಆರೋಪಿಯನ್ನು ಪುನಃ ನೋಡಿದರೆ ಗುರುತಿಸುತೇನೆ ಮುದ್ದೆ ಮಾಲು ಹಾಗೂ ನಗದು ಹಣವನ್ನು ಈಗಾಗಲೇ ಮುಮ 1 ರಿಂದ 19 ಎಂದು ಗುರುತಿಸಲಾಗಿದೆ.

ಪಾಟೀ ಸವಾಲುಃ ಆರೋಪಿ ನಂಬರ ರ ಪರ ಶ್ರೀ.KK ವಕೀಲರಿಂದ ;

**03.**ಆ ದಿನ ಚಾ.ಸಾ.11 ರವರು ಜ್ಞಾಪನಾ ದೂರು, ಮುದ್ದೆಮಾಲು, ಪಂಚನಾಮೆ ಮತ್ತು ಆರೋಪಿತನನ್ನು ಹಾಜರುಪಡಿಸಿದ್ದು ಅದನ್ನು ನಾನು ಸ್ವೀಕರಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ಸ್ವ ಖುಷಿ ಹೇಳಿಕೆಯನ್ನು ನೀಡಿರುತ್ತಾನೆ ಎನ್ನುವ ಮಾತು ಸುಳ್ಳು ಎಂದರೆ ಸರಿಯಲ್ಲ. ಎಷ್ಟು ಮುಖ ಬೆಲೆಯ ನೋಟುಗಳನ್ನು ಜಪ್ತುಪಡಿಸಿಕೊಂಡಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ನನ್ನ ತನಿಖಾ ಪ್ರಕ್ರಿಯೆಯಲ್ಲಿ ಸಾರ್ವಜನಿಕರ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ಸಾಕ್ಷಿದಾರರ ಹೇಳಿಕೆ ಪಡೆದಿರುತ್ತೇನೆ ಮತ್ತು ರಸಾಯನಿಕ ಪರೀಕ್ಷೆಗೆ ಕಳುಹಿಸಿರುತ್ತೇನೆ ಎನ್ನುವ ಮಾತು ಸುಳ್ಳು ಎಂದರೆ ಸರಿಯಲ್ಲ. ಈ ತನಿಖೆಯನ್ನು ಚಾ.ಸಾ.11 ರವರಿಗೆ ವಹಿಸಿದೆ ಎನ್ನುವ ಮಾತು ಸುಳ್ಳು ಎಂದರೆ ಸರಿಯಲ್ಲ. ಆರೋಪಿಯು ಯಾವುದೇ ತಪ್ಪು ಮಾಡದೇ ಇದ್ದರೂ ಕೂಡ ಅಂಕಿಸಂಖ್ಯೆಗೋಸ್ಕರ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ, " ನನ್ನ ಸಮಕ್ಷಮ "

**Sd/-**

( ಶ್ರೀಮತಿ ಅಕ್ಷತಾ ಟಿ .)
ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ
ದಂಡಾಧಿಕಾರಿಗಳು., ಹಡಗಲಿ.